ಮಂಗಳೂರು ವಿವಿಯಲ್ಲೊಂದು ಪರಿಸರ ಸ್ನೇಹಿ ನಡೆ

‘ಗಿಡನೆಟ್ಟು ಹುಟ್ಟುಹಬ್ಬ’ ಅಭಿಯಾನಕ್ಕೆ ಚಾಲನೆ

ಕೊಣಾಜೆ, ಜ.22: ಮಂಗಳೂರು ವಿವಿಯಲ್ಲಿ ವಿದ್ಯಾರ್ಥಿಗಳು ಗಿಡ ನೆಡುವ ಮೂಲಕ ಹುಟ್ಟುಹಬ್ಬವನ್ನು ಆಚರಿಸುತ್ತಾರೆ. ಹೀಗೊಂದು ಪರಿಸರಸ್ನೇಹಿ ಪರಿಕಲ್ಪನೆಗೆ ಸ್ವತಃ ಕುಲಪತಿಯವರು ಮುಂದಾಗಿದ್ದು, ಬುಧವಾರ ಎಸ್‌ವಿಪಿ ಕನ್ನಡ ವಿಭಾಗದ ಮುಂಭಾಗದಲ್ಲಿ ಈ ಅಭಿಯಾನಕ್ಕೆ ಚಾಲನೆ ನೀಡಿದ್ದಾರೆ.

ಎಸ್‌ವಿಪಿ ಕನ್ನಡ ವಿಭಾಗದ ದ್ವಿತೀಯ ಎಂಎ ವಿದ್ಯಾರ್ಥಿನಿ ಸುಶ್ಮಿತ ಅವರ ಹುಟ್ಟುಹಬ್ಬದ ಪ್ರಯುಕ್ತ ಹಣ್ಣಿನ ಗಿಡನೆಟ್ಟು ಸಂಭ್ರಮಿಸಲಾಯಿತು.

ಈ ಸಂದರ್ಭ ಮಾತನಾಡಿದ ವಿವಿ ಕುಲಪತಿ ಪ್ರೊ.ಪಿ.ಎಲ್.ಧರ್ಮ, ವಿದ್ಯಾರ್ಥಿಗಳು ಕಲಿಕೆಯ ಜೊತೆಗೆ ಪರಿಸರ ಸ್ನೇಹಿ ಸಂವೇದನೆಯನ್ನು ಹೊಂದುವುದು ಅಗತ್ಯವಿದೆ. ನೆಟ್ಟ ಹಣ್ಣಿನ ಗಿಡವನ್ನು ಪ್ರೀತಿಸಿ ಅದರಲ್ಲಿ ಹಣ್ಣಾಗಿ ಪಕ್ಷಿಗಳೋ, ಮಕ್ಕಳೋ ತಿಂದು ಖುಷಿ ಪಡಲಿ. ಮಂಗಳೂರು ವಿಶ್ವವಿದ್ಯಾನಿಲಯ ಈಗಾಗಲೇ ಗ್ರೀನ್ ಮೆಟ್ರಿಕಲ್ಲಿ ಮೊದಲ ಸ್ಥಾನದಲ್ಲಿದೆ. ಅದನ್ನು ನಿರಂತರ ಸಂರಕ್ಷಿಸಿಕೊಂಡು ಬರೋಣ ಎಂದರು.

ಪ್ರತಿಯೊಬ್ಬ ವಿದ್ಯಾರ್ಥಿಯು ತನ್ನ ಹುಟ್ಟುಹಬ್ಬ ಅಥವಾ ಅಮ್ಮನ ಹೆಸರಲ್ಲಿ, ತನಗೆ ಪ್ರೀತಿ ಪಾತ್ರರಾದವರ ಹೆಸರಲ್ಲಿ ಗಿಡ ನೆಟ್ಟು ಪೋಷಿಸಬೇಕು ಎಂದು ಸಲಹೆ ನೀಡಿದರು.

ಹುಟ್ಟುಹಬ್ಬ ಆಚರಿಸಿದ ವಿದ್ಯಾರ್ಥಿನಿ ಸುಶ್ಮಿತ ಇದೊಂದು ಮರೆಯಲಾರದ ಅನುಭವ. ಮುಂದೆ ಪ್ರತೀ ವರ್ಷ ಗಿಡ ನೆಡುವ ಮೂಲಕವೇ ಹುಟ್ಟುಹಬ್ಬ ಆಚರಿಸುತ್ತೇನೆ ಎಂದರು.

ಕಾರ್ಯಕ್ರಮದಲ್ಲಿ ಕನ್ನಡ ವಿಭಾಗದ ಅಧ್ಯಕ್ಷ ಡಾ.ಸೋಮಣ್ಣ, ಪ್ರಾಧ್ಯಾಪಕರಾದ ಡಾ.ನಾಗಪ್ಪ ಗೌಡ, ಡಾ.ಧನಂಜಯ ಕುಂಬ್ಳೆ, ಡಾ.ಯಶುಕುಮಾರ್, ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ಪ್ರೊ.ಪ್ರಶಾಂತ್ ನಾಯ್ಕ್, ವಿವಿ ವಿದ್ಯಾರ್ಥಿ ಪರಿಷತ್ತಿನ ನಾಯಕರು ಮತ್ತಿತರರು ಉಪಸ್ಥಿತರಿದ್ದರು.

Mangalore Edition
Jan 23, 2025 Page No. 5

ವಿವಿ ಕುಲಪತಿ ಪ್ರೊ.ಪಿ.ಎಲ್ ಧರ್ಮ ಅಭಿಪ್ರಾಯ

ಕಲಿಕೆಯೊಂದಿಗೆ ಪರಿಸರ ಪ್ರೇಮ

• **ಕೊಣಾಜೆ:** ವಿದ್ಯಾರ್ಥಿಗಳು ಕಲಿಕೆಯ ಜೊತೆಗೆ ಪರಿಸರ ಸ್ನೇಹಿ ಸಂವೇದನೆಯನ್ನು ಹೊಂದುವುದು ಅಗತ್ಯವಿದೆ. ನೆಟ್ಟ ಹಣ್ಣಿನ ಗಿಡವನ್ನು ಪ್ರೀತಿಸಿ. ಅದರಲ್ಲಿ ಹಣ್ಣಾಗಿ ಪಕ್ಷಿಗಳೋ, ಮಕ್ಕಳೋ ತಿಂದು ಖುಷಿ ಪಡಲಿ. ಮಂಗಳೂರು ವಿಶ್ವವಿದ್ಯಾಲಯ ಈಗಾಗಲೇ ಗ್ರೀನ್ ಮೆಟ್ರಿಕಲ್ಲಿ ಮೊದಲ ಸ್ಥಾನದಲ್ಲಿದೆ. ಅದನ್ನು ನಿರಂತರ ಸಂರಕ್ಷಿಸಿಕೊಂಡು ಬರೋಣ ಎಂದು ಮಂಗಳೂರು ವಿವಿ ಕುಲಪತಿ ಪ್ರೊ.ಪಿ.ಎಲ್ ಧರ್ಮ ಅವರು ಹೇಳಿದರು.

ಗಿಡನೆಟ್ಟು ಹುಟ್ಟು ಹಬ್ಬ ಆಚರಣೆ ನಡೆಯಿತು.

ಮಂಗಳೂರು ವಿವಿಯಲ್ಲಿ ವಿದ್ಯಾರ್ಥಿಗಳು ಗಿಡನೆಟ್ಟು ಹುಟ್ಟು ಹಬ್ಬ ಆಚರಿಸುವ ಪರಿಸರಸ್ನೇಹಿ ಅಭಿಯಾನಕ್ಕೆ ಸ್ವತಃ ಕುಲಪತಿಯವರು ಮುಂದಾಗಿದ್ದು ಬುಧವಾರ ಎಸ್ ವಿಪಿ ಕನ್ನಡ ವಿಭಾಗದ ಮುಂಭಾಗದಲ್ಲಿ ಈ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದರು.

ಪ್ರತಿಯೊಬ್ಬ ವಿದ್ಯಾರ್ಥಿಯು ತನ್ನ ಹುಟ್ಟುಹಬ್ಬ ಅಥವಾ ಅಮ್ಮನ ಹೆಸರಲ್ಲಿ, ತನಗೆ ಪ್ರೀತಿಪಾತ್ರರಾದವರ ಹೆಸರಲ್ಲಿ ಗಿಡ ನೆಟ್ಟು ಪೋಷಿಸಬೇಕು ಎಂದು ಸಲಹೆ ನೀಡಿದರು.

ಎಸ್ ವಿಪಿ ಕನ್ನಡ ವಿಭಾಗದ ದ್ವಿತೀಯ ಎಂ.ಎ. ವಿದ್ಯಾರ್ಥಿನಿ ಸುಶ್ರಿತ ಇವರ ಹುಟ್ಟುಹಬ್ಬದ ಪ್ರಯುಕ್ತ ಹಣ್ಣಿನ ಗಿಡನೆಟ್ಟು ಸಂಭ್ರಮಿಸಲಾಯಿತು.

ಹುಟ್ಟುಹಬ್ಬ ಆಚರಿಸಿದ ವಿದ್ಯಾರ್ಥಿನಿ ಸುಶ್ರಿತಾ ಇದೊಂದು ಮರೆಯಲಾರದ ಅನುಭವ. ಮುಂದೆ ಪ್ರತೀವರ್ಷ ಗಿಡ ನೆಡುವ ಮೂಲಕವೇ ಹುಟ್ಟು ಹಬ್ಬ ಆಚರಿಸುತ್ತೇನೆ ಎಂದರು.

ಕಾರ್ಯಕ್ರಮದಲ್ಲಿ ಕನ್ನಡ ವಿಭಾಗದ ಅಧ್ಯಕ್ಷರಾದ ಡಾ.ಸೋಮಣ್ಣ, ಪ್ರಾಧ್ಯಾಪಕರಾದ ಡಾ. ನಾಗಪ್ಪ ಗೌಡ, ಡಾ.ಧನಂಜಯ ಕುಂಬ್ಳೆ, ಡಾ.ಯಶು ಕುಮಾರ್, ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ಪ್ರೊ.ಪ್ರಶಾಂತ್ ನಾಯ್ಕ್, ವಿವಿ ವಿದ್ಯಾರ್ಥಿ ಪರಿಷತ್ತಿನ ನಾಯಕರು ಮೊದಲಾದವರು ಈ ಸಂದರ್ಭ ಉಪಸ್ಥಿತರಿದ್ದರು

ವಿ.ವಿ.ಯಲ್ಲಿ ಕುಲಪತಿಗಳಿಂದ ಪರಿಸರ ಸ್ನೇಹಿ ನಡೆ
ಗಿಡನೆಟ್ಟು ಹುಟ್ಟುಹಬ್ಬ ಅಭಿಯಾನಕ್ಕೆ ಚಾಲನೆ

ಉಳ್ಳಾಲ, ಜು. 22: ಮಂಗಳೂರು ವಿ.ವಿ.ಯಲ್ಲಿ ಗಿಡ ನೆಡುವ ಮೂಲಕ ವಿದ್ಯಾರ್ಥಿಗಳ ಹುಟ್ಟುಹಬ್ಬವನ್ನು ಆಚರಿಸಲು ಮುಂದಾಗಿದೆ. ಹೀಗೊಂದು ಪರಿಸರಸ್ನೇಹಿ ಪರಿಕಲ್ಪನೆಗೆ ಸ್ವತಃ ಕುಲಪತಿಗಳೇ ಮುಂದಾಗಿದ್ದು ಬುಧವಾರ ಎಸ್ ವಿಪಿ ಕನ್ನಡ ವಿಭಾಗದ ಮುಂಭಾಗದಲ್ಲಿ ಈ ಅಭಿಯಾನಕ್ಕೆ ಚಾಲನೆ ನೀಡಿದ್ದಾರೆ.

ಎಸ್‌ವಿಪಿ ಕನ್ನಡ ವಿಭಾಗದ ದ್ವಿತೀಯ ಎಂ ಎ ವಿದ್ಯಾರ್ಥಿನಿಯ ಹುಟ್ಟುಹಬ್ಬದ ಪ್ರಯುಕ್ತ ಹಣ್ಣಿನ ಗಿಡನೆಟ್ಟು ಸಂಭ್ರಮಿಸಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ವಿ.ವಿ. ಕುಲಪತಿ ಪ್ರೊ। ಪಿ.ಎಲ್ ಧರ್ಮ ವಿದ್ಯಾರ್ಥಿಗಳು ಕಲಿಕೆಯ ಜತೆಗೆ ಪರಿಸರ ಸ್ನೇಹಿ ಸಂವೇದನೆಯನ್ನು ಹೊಂದುವುದು ಅಗತ್ಯವಿದೆ. ನೆಟ್ಟ ಹಣ್ಣಿನ ಗಿಡವನ್ನು ಪ್ರೀತಿಸಿ. ಅದರಲ್ಲಿ ಹಣ್ಣಾಗಿ ಪಕ್ಷಿಗಳೋ, ಮಕ್ಕಳೋ ತಿಂದು ಖುಷಿ ಪಡಲಿ. ಮಂಗಳೂರು ವಿ.ವಿ. ಈಗಾಗಲೇ ಗ್ರೀನ್ ಮೆಟ್ರಿಕಲ್ಲಿ ಮೊದಲ ಸ್ಥಾನದಲ್ಲಿದೆ. ಅದನ್ನು ನಿರಂತರ ಸಂರಕ್ಷಿಸಿಕೊಂಡು ಬರೋಣ ಎಂದರು.

ಕಾರ್ಯಕ್ರಮದಲ್ಲಿ ಕನ್ನಡ ವಿಭಾಗದ ಅಧ್ಯಕ್ಷ ಡಾ। ಸೋಮಣ್ಣ, ಪ್ರಾಧ್ಯಾಪಕ ಡಾ। ನಾಗಪ್ಪ ಗೌಡ, ಡಾ। ಧನಂಜಯ ಕುಂಬ್ಳೆ, ಡಾ। ಯಶುಕುಮಾರ್, ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ಪ್ರೊ। ಪ್ರಶಾಂತ್ ನಾಯ್ಕ್, ವಿ.ವಿ. ವಿದ್ಯಾರ್ಥಿ ಪರಿಷತ್ತಿನ ನಾಯಕರು ಉಪಸ್ಥಿತರಿದ್ದರು.

on Wednesday.

ment for constructing cir-

true.

Mangalore University launches 'Gidanettu Hutthuhabbada Abhiyana'

The Hindu Bureau
MANGALURU

Mangalore University has launched a campaign called 'Gidanettu Hutthuhabbada Abhiyana' (planting saplings on birthdays), where students will celebrate their birthdays by planting saplings instead of cutting cakes.

Vice-Chancellor P.L. Dharma launched the initiative on the university campus at Mangalagangotri on Wednesday. The first sapling under the initiative was planted by second-semester Kannada postgraduate student Sushmitha.

Mangalore University students and staff at the launch of 'Gidanettu Hutthuhabbada Abhiyana' on Wednesday. SPECIAL ARRANGEMENT

Speaking on the occasion, Prof. Dharma stressed the importance of environmental awareness among students. "Students should not only focus on academics but also develop a sense of responsibility towards the environment," he said.

Prof. Dharma suggested that students plant saplings on their birthdays, anniversaries, or special occasions, and nurture them. He also encouraged students to adopt trees and take care of them.

Ms. Sushmitha expressed her gratitude to the university for providing her with a unique and memorable experience. "I will continue to celebrate my birthday by planting saplings every year," she said. The campaign is part of the university's efforts to promote environmental awareness and sustainability.

Kannada Department chairman Somanna, teachers Nagappa Gowda, Dhananjaya Kumble, Yashu kumar, Student Welfare Officer Prashant Nayak were present.

Theft accused held